

# ಗ್ರ್ಯಾಂಡ್ ವಜೀರ್

■ ಪ್ರವೀಣ ಕುಲಕರ್ಣಿ

ಹವಾಮಾನ ಬದಲಾವಣೆ ಪರಿಣಾಮಗಳನ್ನು ತಗ್ಗಿಸುವ ಜಪ ನಡೆಸಿದ ದುಬೈ ಸಮ್ಮೇಳನ (COP–28) ಕಳೆದ ವಾರ ಮುಗಿಯಿತಲ್ಲ? ಅದರ 'ಗ್ರ್ಯಾಂಡ್ ವಜೀರ್' ಎಂದೇ ಜಗತ್ತಿನ ಉದ್ದಗಲಕ್ಕೂ ಈಗ ಹೆಸರಾದವರು ಯುನೈಟೆಡ್ ಅರಬ್ ಎಮಿರೇಟ್ಸ್‌ನ ಕೈಗಾರಿಕಾ ಸಚಿವ ಸುಲ್ತಾನ್ ಅಹ್ಮದ್ ಜಬೇರ್ ಅವರು. ಯುಎಇಯ ಸಾಂಪ್ರದಾಯಿಕ ಉಡುಗೆ ತೊಟ್ಟು, ಗಡ್ಡ ಟ್ರಿಮ್ ಮಾಡಿಕೊಂಡು, ಕಪ್ಪು ಫ್ರೇಮಿನ ಕನ್ನಡಕ ಹಾಕಿಕೊಂಡು ಸಮ್ಮೇಳನದ ತಾಣಗಳಲ್ಲೆಲ್ಲ ಸುತ್ತಾಡುತ್ತಿದ್ದ ಈ ಆರು ಅಡಿ, ಮೂರು ಇಂಚಿನ ಆಸಾಮಿ, ತಮ್ಮ ಪಾದರಸದಂತಹ ವ್ಯಕ್ತಿತ್ವದಿಂದ ಜಗತ್ತಿನ ನಾಯಕರ ಮನ ಗೆದ್ದವರು. ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯ ಸಿಇಒ ಕೂಡ ಆಗಿರುವ ಈ 'ವಜೀರ್', ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸುವ ಲೆಕ್ಕಾಚಾರದಲ್ಲಿ ತಮ್ಮ ದೇಶ ಏನೇನು ಲಾಭ ಗಳಿಸಬಹುದು ಎಂಬ ಒಳ ಲೆಕ್ಕಾಚಾರವನ್ನೂ ಮಾಡಿಕೊಂಡವರು.

ಹೇಳಿ ಕೇಳಿ ದುಬೈ ಪ್ರವಾಸಿಗರ ಸ್ವರ್ಗ. ಭೂಮಿಯ ಮೇಲಿನ ಎಲ್ಲ ಭೋಗಗಳ ನೆಲೆ ಎಂದೇ ಹೆಸರಾದ ತಾಣ. ಅಲ್ಲಿನ ಸಂಪತ್ತು ಸೃಷ್ಟಿಯಾಗಲು ಕಾರಣವಾಗಿದ್ದೇ ಅಲ್ಲಿ ದೊರೆಯುವ ತೈಲ ಉತ್ಪನ್ನ. ತೈಲ ಉತ್ಪನ್ನ ಬಳಕೆ ಕಡಿಮೆಮಾಡಲು ಅಗತ್ಯವಾದ ನೀತಿ ನಿರೂಪಣೆಗೆ ಸಮ್ಮೇಳನ ನಡೆದದ್ದು ಮಾತ್ರ ಹೆಚ್ಚು ತೈಲ ಉತ್ಪನ್ನ ಮಾಡುವ ತಾಣದಲ್ಲಿ! COP–28ನ ಅಧ್ಯಕ್ಷರನ್ನಾಗಿ ಜಬೇರ್ ಅವರನ್ನು ಆಯ್ಕೆ ಮಾಡಿದ್ದಕ್ಕೆ ಪರಿಸರವಾದಿಗಳು ತೀವ್ರವಾಗಿ ವಿರೋಧ ವ್ಯಕ್ತಪಡಿಸಿದ್ದೂ ಉಂಟು. ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯಲ್ಲಿ ಅವರು ಹೊಂದಿರುವ ಸ್ಥಾನಮಾನವೇ ಅದಕ್ಕೆ ಕಾರಣ. ಫಾಸಿಲ್ ಇಂಧನದ ಬಳಕೆ ಕಡಿಮೆ ಮಾಡುವುದು COP–28 ಸಮ್ಮೇಳನದ ಮುಖ್ಯ ಉದ್ದೇಶಗಳಲ್ಲಿ ಒಂದು. ಆದರೆ, ಜಬೇರ್ ಅವರು ಸಿಇಒ ಆಗಿ ಅಧಿಕಾರ ವಹಿಸಿಕೊಂಡ ಮೇಲೆ ಅಬುಧಾಬಿ ಕಂಪನಿ ಹೆಚ್ಚಿನ ಪ್ರಮಾಣದ ತೈಲ ಹಾಗೂ ಅನಿಲವನ್ನು ಉತ್ಪಾದನೆ ಮಾಡಿದೆ. ಅಂದರೆ, ಸಮ್ಮೇಳನದ ಉದ್ದೇಶಕ್ಕೂ 'ಗ್ರ್ಯಾಂಡ್ ವಜೀರ್' ಅವರ ಧೋರಣೆಗೂ ತಾಳಮೇಳವೇ ಆಗುವುದಿಲ್ಲ. ಪರಿಸರವಾದಿಗಳ ಕಣ್ಣು ಕೆಂಪಗಾಗಿಸಿದ್ದು ಈ ವಿರೋಧಾಭಾಸವೇ. ಸಮ್ಮೇಳನಕ್ಕೆ ಅತ್ಯದ್ಭುತ ಎನ್ನುವಂತಹ ಆತಿಥ್ಯ ನೀಡುವ ಮೂಲಕ ಅಂತಹ ಅಪಸ್ವರಗಳು ಸದ್ದು ಮಾಡದಂತೆ ನೋಡಿಕೊಂಡವರು ಜಬೇರ್. ಅಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಮಿಗಳನ್ನು ಹವಾಮಾನ ಬದಲಾವಣೆ ಕುರಿತ ಸಮ್ಮೇಳನಗಳಿಗೆ ಬರುವಂತೆ ಮಾಡಿದವರು. ಭವಿಷ್ಯದ ಇಂಧನ ಮೂಲಗಳ ಕುರಿತು ಉದ್ಯಮ ವಲಯ ಗಂಭೀರವಾಗಿ ಚಿಂತಿಸುವಂತೆಯೂ ಮಾಡಿದವರು.

ಜಬೇರ್ ಅವರನ್ನು ಬೆಳೆಸುವಲ್ಲಿ ಅಲ್ಲಿನ ರಾಜಮನೆತನ ತುಂಬಾ ಕೌಶಲ ಮೆರೆದಿದೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಕೆಮಿಕಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಈ 'ಗ್ರ್ಯಾಂಡ್ ವಜೀರ್' ಲಾಸ್ ಏಂಜಲೀಸ್ ವಿಶ್ವವಿದ್ಯಾಲಯದಲ್ಲಿ ಎಂಬಿಎ ಅಧ್ಯಯನ ಮಾಡಿದ್ದಾರೆ. ಜಗತ್ತಿನ ವಹಿವಾಟುಗಳು ಹೇಗೆ ನಡೆಯುತ್ತವೆ, ರಾಯಭಾರ ಹೇಗೆ ಕೆಲಸ ಮಾಡುತ್ತದೆ ಮತ್ತು ತೈಲದಂತಹ ಅಮೂಲ್ಯ ಸಂಪತ್ತನ್ನು ಹೊಂದಿರುವ ದೇಶವನ್ನು ದೈತ್ಯ ಶಕ್ತಿಯನ್ನಾಗಿ ಹೇಗೆ ಬೆಳೆಸಬೇಕು ಎಂಬುದನ್ನು ಅವರು ಚೆನ್ನಾಗಿ ಕರಗತ ಮಾಡಿಕೊಂಡಿದ್ದಾರೆ. ಸಾಂಪ್ರದಾಯಿಕ ಇಂಧನದ ತನ್ನ ಬಲವನ್ನು ಕಾಪಾಡಿಕೊಳ್ಳುತ್ತಲೇ ಭವಿಷ್ಯದ ಇಂಧನದ ಮೂಲಗಳ ಮೇಲೂ ಹಿಡಿತ ಸಾಧಿಸಿ ಹೇಗೆ ಬೆಳೆಯಬೇಕೆಂಬ ಜಬೇರ್ ಚಿಂತನೆಯ ಫಲವೇ ಮಸ್ದಾರ್ ಕಂಪನಿಯ ಉದಯ. ಭವಿಷ್ಯದ ಇಂಧನ ಕಂಪನಿಯಾದ ಮಸ್ದಾರ್‌ಗೆ ಅವರೇ ಈಗ ಅಧ್ಯಕ್ಷ. ಆ ಕಂಪನಿಯೀಗ ಜಗತ್ತಿನ 40 ದೇಶಗಳಲ್ಲಿ ಇಂಧನ ವಲಯದಲ್ಲಿ ಹೂಡಿಕೆ ಮಾಡಿದೆ. ಇದೀಗ 50ನೇ ವರ್ಷಕ್ಕೆ ಪದಾರ್ಪಣೆ ಮಾಡಿರುವ ಜಬೇರ್ ಅವರು, ಜಗತ್ತಿನ ರಾಜಕಾರಣದ ಎಲ್ಲ ಪಟ್ಟುಗಳನ್ನು ಕರಗತ ಮಾಡಿಕೊಂಡು, ಅದಕ್ಕೆ ತಕ್ಕಂತೆ ದಾಳ ಉರುಳಿಸುವ ಕೌಶಲ ಹೊಂದಿದವರು.

ಉದ್ಯಮದ ಚಲನೆಗಳ ಕುರಿತು, ಜಗತ್ತಿನ ಅರ್ಥವ್ಯವಸ್ಥೆ ಹಿಡಿದ ಜಾಡಿನ ಕುರಿತು, ಜಾಗತಿಕ ಅಭಿವೃದ್ಧಿಯ ಸೂಚ್ಯಂಕದ ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಈ 'ಗ್ರ್ಯಾಂಡ್ ವಜೀರ್', 'ಆ್ಯನ್ ಎನಲಿಸಿಸ್ ಆಫ್ ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್ ಇನ್ ಯುಎಇ' ಎಂಬ ಕೃತಿಯನ್ನೂ ರಚಿಸಿದ್ದಾರೆ. ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಸರ್ಕಾರಗಳ ಮುಖ್ಯಸ್ಥರು, ಖಾಸಗಿ ಕಂಪನಿಗಳು, ಪರಿಸರವಾದಿಗಳು, ವಿಜ್ಞಾನಿಗಳು, ಉದ್ಯಮಿಗಳು, ಚಿಂತಕರು ಮತ್ತು ಸರ್ಕಾರೇತರ ಸಂಘಟನೆಗಳ ವಕ್ತಾರರನ್ನು ಒಂದೇ ದಿಕ್ಕಿನಲ್ಲಿ ಯೋಚನೆ ಮಾಡುವಂತೆ ಮಾಡುವುದೇನು ಸುಲಭದ ಕೆಲಸವಲ್ಲ. ಅದೊಂದು ರೀತಿಯಲ್ಲಿ ಕಪ್ಪೆಗಳನ್ನು ತಕ್ಕಡಿಯಲ್ಲಿಟ್ಟು ತೂಕ ಮಾಡಿದಂತೆ. 84 ಸಾವಿರ ಪ್ರತಿನಿಧಿಗಳ ಮಹಾಮೇಳವನ್ನು ಅತ್ಯದ್ಭುತವಾಗಿ ಸಂಘಟಿಸುವ ಮೂಲಕ 'ಗ್ರ್ಯಾಂಡ್ ವಜೀರ್' ಯಶಸ್ವಿ ಸಂಘಟಕ ಎಂಬ ಹಿರಿಮೆಯನ್ನೂ ತಮ್ಮದಾಗಿಸಿಕೊಂಡಿದ್ದಾರೆ. ಈ ಹಿರಿಮೆಯನ್ನು ಅವರು ತಮ್ಮ ತೈಲೋದ್ಯಮದ ವಿಸ್ತಾರಕ್ಕೆ ಯಾವ ರೀತಿಯಲ್ಲಿ ಬಳಸಿಕೊಳ್ಳುವರೋ ಏನೋ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65